ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿ.ವಿ ಕುಲಪತಿ ಡಾ. ಡಿ.ಎಲ್. ಮಹೇಶ್ವರ್

# ‘ಅಡಿಕೆಗೆ ಪ್ರತ್ಯೇಕ ಮಂಡಳಿ ಅಗತ್ಯ’

**ಪ್ರಜಾವಾಣಿ ವಾರ್ತೆ**

7 Sep, 2017

‘ಅಡಿಕೆ ಸೇವನೆಗೆ ಹೆಚ್ಚು ಒತ್ತುಕೊಡುವುದನ್ನು ಬಿಟ್ಟು ಪರ್ಯಾಯ ಉತ್ಪನ್ನಗಳ ತಯಾರಿಕೆ ಆದ್ಯತೆ ನೀಡಬೇಕು ಎಂಬ ಉದ್ದೇಶದಿಂದ ಪ್ರತ್ಯೇಕ ಮಂಡಳಿ ರಚನೆಗೆ ಶಿಫಾರಸು ಮಾಡಲಾಗಿದೆ’ ಎಂದು ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ಎಲ್. ಮಹೇಶ್ವರ್ ತಿಳಿಸಿದರು.




‘ಅಡಿಕೆಗೆ ಪ್ರತ್ಯೇಕ ಮಂಡಳಿ ಅಗತ್ಯ’

**ಬೆಂಗಳೂರು:** ‘ಅಡಿಕೆ ಸೇವನೆಗೆ ಹೆಚ್ಚು ಒತ್ತುಕೊಡುವುದನ್ನು ಬಿಟ್ಟು ಪರ್ಯಾಯ ಉತ್ಪನ್ನಗಳ ತಯಾರಿಕೆ ಆದ್ಯತೆ ನೀಡಬೇಕು ಎಂಬ ಉದ್ದೇಶದಿಂದ ಪ್ರತ್ಯೇಕ ಮಂಡಳಿ ರಚನೆಗೆ ಶಿಫಾರಸು ಮಾಡಲಾಗಿದೆ’ ಎಂದು ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ಎಲ್. ಮಹೇಶ್ವರ್ ತಿಳಿಸಿದರು.

ಭಾರತೀಯ ತೋಟಗಾರಿಕಾ ವ್ಯವಸ್ಥಾಪಕ ಸಂಸ್ಥೆ ಮತ್ತು ಕೃಷಿ ಬೆಲೆ ಆಯೋಗ ಜಂಟಿಯಾಗಿ ನಗರದಲ್ಲಿ ಬುಧವಾರ ಆಯೋಜಿಸಿದ್ದ ‘ಅಡಿಕೆ ವಲಯದ ಸಹಕಾರಿ ಸಂಘಗಳಲ್ಲಿ ಸುಸ್ಥಿರ ನಿರ್ವಹಣೆ’ ವಿಷಯ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ಪ್ರಸ್ತುತ ಗುಟ್ಕಾ ಉತ್ಪನ್ನಗಳಿಗಾಗಿಯೇ ಅಡಿಕೆಯ ಗರಿಷ್ಠ ಬಳಕೆ ಆಗುತ್ತಿದೆ. ಮುಂದಿನ ದಿನಗಳಲ್ಲಿ ಅದು ನಿಷೇಧ ಆಗಬಹುದು. ಆಗ ಚಿಂತಿಸುವ ಬದಲು ಮುನ್ನೆಚ್ಚರಿಕೆಯಾಗಿ ಅಡಿಕೆ ತಟ್ಟೆ, ಚಹಾ, ಔಷಧ... ಹೀಗೆ ಆಯಾ ಭಾಗದಲ್ಲಿ ಯಾವ ರೀತಿ ಅಡಿಕೆ ಉತ್ಪನ್ನಗಳನ್ನು ಬಳಸಬಹುದು ಎಂಬ ಬಗ್ಗೆ ಅಧ್ಯಯನದ ಅಗತ್ಯವಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದರು.

‘ಈಗಿರುವ ಅಡಿಕೆ ಸಂಘ–ಸಂಸ್ಥೆಗಳು ಈ ರೀತಿಯ ಸಂಶೋಧನೆಗಳಿಗೆ ಹೆಚ್ಚು ಒತ್ತು ನೀಡುತ್ತಿಲ್ಲ. ಹಾಗಾಗಿ ಅದಕ್ಕಾಗಿ ಒಂದು ಪ್ರತ್ಯೇಕ ಮಂಡಳಿ ರೂಪುಗೊಂಡರೆ ಅಡಿಕೆಯ ಸಮಗ್ರ ವಿಷಯದ ಕುರಿತು ಸಂಶೋಧನೆಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಬೆಳೆಗಾರರು, ಸಹಕಾರಿ ಸಂಸ್ಥೆಗಳು, ಮಾರಾಟಗಾರರಿಂದ ಮಾಹಿತಿ ಪಡೆದು ವರದಿ ರೂಪಿಸಲಾಗಿದೆ. ಜುಲೈನಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ’ ಎಂದು ತಿಳಿಸಿದರು.

ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ, ‘ಕಾಫಿ, ರಬ್ಬರ್, ಚಹಾಗಿಂತ ಅಡಿಕೆ ಹೆಚ್ಚು ವಹಿವಾಟು ಆಗುತ್ತದೆ. ಪ್ರತಿ ವರ್ಷ ಸುಮಾರು ₹ 10 ಸಾವಿರ ಕೋಟಿ ವಹಿವಾಟು ನಡೆಯುತ್ತದೆ. ಅಲ್ಲಿನ ಸಮಸ್ಯೆಗಳಿಗೆ ಪರಿಹಾರ ನೀಡಲು ಮಂಡಳಿಯ ಅಗತ್ಯವಿದೆ. ಅಡಿಕೆ ಸೇರಿದಂತೆ ಎಲ್ಲ ಬೆಳೆಗಾರರು ಬೆಂಬಲ ಬೆಲೆಗಾಗಿ ಬೇಡುತ್ತಿದ್ದಾರೆ. ಈ ಪರಿಸ್ಥಿತಿ ಬದಲಿಸಲು ಗುಂಪು ಮಾರಾಟ ವ್ಯವಸ್ಥೆ ರೂಪಿಸಬೇಕು. ಆಗ ರೈತರು ತಮ್ಮ ಬೆಳೆಗೆ ತಾವೇ ಬೆಲೆ ನಿರ್ಧರಿಸಬಹುದು’ ಎಂದರು.

**ಮಂಡಳಿ ರಚನೆಯ ಅಗತ್ಯವಿಲ್ಲ:** ಕ್ಯಾಂಪ್ಕೊ ನಿರ್ದೇಶಕ ಕೊಂಕೋಡಿ ಪದ್ಮನಾಭ ಮಾತನಾಡಿ, ‘ಮಂಡಳಿಗಳನ್ನು ಸೃಷ್ಟಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಈಗಿರುವ ಮಂಡಳಿಗಳಲ್ಲೇ ಅಧಿಕಾರಿಗಳ ಕೊರತೆ ಇದೆ. ಸಾಕಷ್ಟು ಮಂಡಳಿಗಳಿಗೆ ಅಧ್ಯಕ್ಷರೇ ಇಲ್ಲ. ಹೀಗಿರುವಾಗ ಅಡಿಕೆಗೊಂದು ಮಂಡಳಿ ರಚಿಸುವುದರಲ್ಲಿ ಅರ್ಥವಿಲ್ಲ. ಅಡಿಕೆ ಬೆಳೆಗಾರರು ಸಹಕಾರಿ ವ್ಯವಸ್ಥೆಯಡಿ ನೆಮ್ಮದಿಯಿಂದಿದ್ದಾರೆ. ಒಂದು ವೇಳೆ ಮಂಡಳಿಯನ್ನು ರಚಿಸಲೇಬೇಕಾದರೆ, ಅದರ ಸ್ವರೂಪದಲ್ಲಿ ಬದಲಾವಣೆ ಆಗಬೇಕು. ಮಂಡಳಿಗಳಿಗೆ ರೈತ ಸ್ನೇಹಿ ಅಧಿಕಾರಿಗಳು ನೇಮಕವಾಗಬೇಕು. ಸದಸ್ಯರೂ ಸಾಕಷ್ಟು ಜ್ಞಾನ ಹೊಂದಿರಬೇಕು’ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

‘ಅಧಿಕಾರಿಗಳು ಮತ್ತು ವಿಜ್ಞಾನಿಗಳು ರೈತರ ಹೆಗಲ ಮೇಲೆ ಕೈ ಹಾಕಿಕೊಂಡು ನಡೆಯುವ ವಾತಾವರಣ ಸೃಷ್ಟಿಯಾದಾಗ ನಮ್ಮ ದೇಶದಲ್ಲಿ ನಿಜವಾದ ಹಸಿರು ಕ್ರಾಂತಿ ಸಾಧ್ಯವಾಗುತ್ತದೆ’ ಎಂದು ತಿಳಿಸಿದರು.